**<u>ಸಾಕ್ಷಿಗೆ ದಿನಾಂಕ 06.11.2025 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು: ಅರ್ಜಿದಾರರ ಪರ ಶ್ರೀ ಎಸ್ ಕೆ ವಕೀಲರಿಂದಃ</u>**

1. ಕೆಎ-35-ಟಿಬಿ-6163 ಯ ಟ್ರಾಕ್ಟರ್ ಚಾಲಕನಿಗೆ ವಾಹನ ಚಾಲನಾ ಪರವಾನಗಿ ಪತ್ರ ಇರಲಿಲ್ಲ ಎಂಬ ಸಂಗತಿ ದೋಷಾರೋಪಣಾಪಟ್ಟಿಯ ಮುಖಾಂತರ ಗೊತ್ತಾಗಿರುತ್ತದೆ. ದೋಷಾರೋಪಣಾಪಟ್ಟಿಯನ್ನು ಹೊರತುಪಡಿಸಿ ವಿಮಾ ಕಂಪನಿಯಿಂದ ಪ್ರತ್ಯೇಕ ತನಿಖೆ ಮಾಡಿರುತ್ತೇವೆ. ನಮ್ಮ ಕಂಪನಿಯ ತನಿಖಾ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲು ತೊಂದರೆ ಇಲ್ಲ ಎಂದರೆ ಸರಿ. ಅಪಘಾತದ ದಿನ ಟ್ರಾಕ್ಟರ್ ಚಾಲಕನಿಗೆ ಚಾಲನಾ ಪರವಾನಗಿ ಪತ್ರ ಇತ್ತು ಎಂದರೆ ಸರಿಯಲ್ಲ. ಅಪಘಾತದ ದಿನ ಕೃಷಿ ಚಟುವಟಿಕೆಗೆ ಬಳಕೆ ಮಾಡಲಾಗುತ್ತಿತ್ತು ಎಂದರೆ ಸರಿಯಲ್ಲ. ಪೊಲೀಸರು ಟ್ರಾಕ್ಟರ್ ಚಾಲಕನ ಚಾಲನಾ ಪರವಾನಗಿ ಪತ್ರ ಇಲ್ಲವೆಂದು ದೋಷಾರೋಪಣಾಪಟ್ಟಿಯಲ್ಲಿ ತಪ್ಪಾಗಿ ನಮೂದಿಸಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ವಿಮಾ ಕಂಪನಿಯು ಪರಿಹಾರ ನೀಡುವ ಬಾಧ್ಯತೆಯಿಂದ ತಪ್ಪಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ 1 ನೇ ಎದುರುದಾರರ ಪರ ವಕೀಲರ ಕೋರಿಕೆಯ ಮೇರೆಗೆ** ಮುಂದೂಡಲಾಯಿತು.

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**